# ‘ಬಂಜೆತನ’ ಸಮಸ್ಯೆಗೆ ಪರಿಣಾಮಕಾರಿ ಚಿಕಿತ್ಸೆ ನೀಡುವ ಮೂಲಕ ಸಮಗ್ರ ಕುಟುಂಬದ ಆಶಾಕಿರಣ!

**ಡಾ. ಶ್ರೀಕಾಂತ್ ಮೋರ್ಲಾವರ್**
ಸಿಎಂಡಿ
ಹೋಮಿಯೊಕೇರ್ ಇಂಟರ್‌ನ್ಯಾಷನಲ್



ನಿಸರ್ಗದ ಎಲ್ಲಾ ಕೊಡುಗೆಗಳಲ್ಲಿ ತಾಯ್ತನದ ಕೊಡುಗೆ ಅತ್ಯಂತ ಆಶಾದಾಯಕವಾಗಿದೆ ಮತ್ತು ಅಮೂಲ್ಯವಾಗಿದೆ. ಪ್ರಚಲಿತ ದಿನಮಾನದ ಜೀವನಶೈಲಿ ಮತ್ತು ನೈಸರ್ಗಿಕ ಪರಿಸ್ಥಿತಿಗಳಿಂದಾಗಿ ಬಂಜೆತನ ಸಮಸ್ಯೆ ಭಾರಿ ಸಾಮಾನ್ಯವಾಗಿಬಿಟ್ಟಿದೆ. ಈ ಸಮಸ್ಯೆಯು ವಿವಾಹಿತ ದಂಪತಿಗಳಲ್ಲಿ ಮಾನಸಿಕ ಅಸಮತೋಲನತೆ ಸೃಷ್ಟಿಸುವುದಷ್ಟೆ ಅಲ್ಲದೆ, ಬಂಧು ಬಳಗ ಮತ್ತು ಸ್ನೇಹಿತರ ಸಂಬಂಧಗಳ ಮೇಲೂ ದುಷ್ಪರಿಣಾಮ ಉಂಟು ಮಾಡುತ್ತದೆ. ಯಾವುದೇ ಗಂಭೀರ ಆರೋಗ್ಯ ಸಮಸ್ಯೆಗಳು ಇಲ್ಲದಿರುವ ದಂಪತಿಗಳಾದ್ಯಂತ, 10% ರಷ್ಟು ದಂಪತಿಗಳು ಸಂತಾನ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ ಎಂಬುದು ಕೂಡ ತಿಳಿದುಬಂದಿದೆ. ಈ ಅಂಶವನ್ನೇ ಬಂಜೆತನ ಎಂದು ಗುರುತಿಸಲಾಗುತ್ತಿದೆ.

## ‘ಬಂಜೆತನ’ ಎಂದರೇನು? ಬಂಜೆತನಕ್ಕೆ ಕಾರಣಗಳೇನು? ‘ಬಂಜೆತನಕ್ಕೆ’ ಚಿಕಿತ್ಸೆ ನೀಡುವಲ್ಲಿ ಹೋಮಿಯೋಪತಿ ಹೇಗೆ ಸಹಕಾರಿಯಾಗಿದೆ?

### ಬಂಜೆತನ ಸಮಸ್ಯೆಯಲ್ಲಿ ಎರಡು ರೀತಿಗಳಿವೆ:

1. **ಪ್ರಾಥಮಿಕ ಬಂಜೆತನ:** ವೈವಾಹಿಕ ಮತ್ತು ಲೈಂಗಿಕ ಜೀವನದ ಎರಡು ವರ್ಷಗಳ ನಂತರವೂ ಗರ್ಭಧರಿಸುವ ಸಾಮರ್ಥ್ಯ ಇಲ್ಲದಿರುವುದು.

2. **ಅನುಷಂಗಿಕ ಬಂಜೆತನ:** ಒಂದು ಗರ್ಭಪಾತದ ಬಳಿಕ ಅಥವಾ ಮೊದಲ ಗರ್ಭಧಾರಣೆಯ ನಂತರ ಎರಡನೇ ಬಾರಿಗೆ ಗರ್ಭಧರಿಸುವ ಸಾಮರ್ಥ್ಯ ಇಲ್ಲದಿರುವುದು.



### ಮಹಿಳೆಯರಲ್ಲಿ ಬಂಜೆತನಕ್ಕೆ ಕಾರಣಗಳು:

- ಸ್ತ್ರೀಯರ ಸಂತಾನೋತ್ಪತ್ತಿ ವ್ಯವಸ್ಥೆಯಲ್ಲಿನ ಸಮಸ್ಯೆಗಳು: ಗರ್ಭಕೋಶ ಚಿಕ್ಕದಾಗಿರುವುದು (ಇನ್ಫಂಟೈಲ್ ಯುಟೆರಸ್), ಗರ್ಭಕೋಶ ಇಲ್ಲದಿರುವುದು, ಗರ್ಭಕೋಶದಲ್ಲಿ ಎರಡು ಕೋಶಗಳಿರುವುದು (ಬೈಕಾರ್ನುಯೇಟ್ ಯುಟೆರಸ್), ಫ್ಯಾಲ್ಲೋಪಿಯನ್ ನಾಳಗಳು ಇಲ್ಲದಿರುವುದು ಅಥವಾ ಫ್ಯಾಲ್ಲೋಪಿಯನ್ ನಾಳಗಳು ಬ್ಲಾಕ್ ಆಗಿರುವುದು (ಟ್ಯೂಬಲ್ ಬ್ಲಾಕ್ಸ್), ಅಂಡಾಶಯಗಳ ಕುಂಠಿತ ಬೆಳವಣಿಗೆ, ಕಿರಿದಾದ ಯೋನಿ ಅಥವಾ ಮುಚ್ಚಿದ ಯೋನಿ.
- ಹಾರ್ಮೋನ್ ಸಮಸ್ಯೆಗಳಿಂದಾಗಿ ಬಂಜೆತನ: ಥೈರಾಯ್ಡ್ ಸಮಸ್ಯೆಗಳು, ಪಿಸಿಓಡಿ, ಎಫ್‌ಎಸ್‌ಎಚ್, ಎಲ್‌ಎಚ್, ಪ್ರೊಲ್ಯಾಕ್ಟಿನ್ ಹಾರ್ಮೋನಲ್ ಅಸಮತೋಲನತೆ, ಋತುಚಕ್ರ ಅವಧಿಗಳಲ್ಲಿನ ಅಸಮತೋಲನತೆ, ಎಂಡೋಮೆಟ್ರಿಯೋಸಿಸ್ ಇತ್ಯಾದಿ.
- ಅಂಡಾಶಯಗಳಲ್ಲಿ ರಚನೆಗೊಳ್ಳುವ ಟ್ಯೂಮರ್‌ಗಳು ಫ್ಯಾಲ್ಲೋಪಿಯನ್ ನಾಳಗಳನ್ನು ಬ್ಲಾಕ್ ಮಾಡುವುದು.

### ಪುರುಷರಲ್ಲಿ ಬಂಜೆತನಕ್ಕೆ ಕಾರಣಗಳು:

- **ಅಜೂಸ್ಪರ್ಮಿಯಾ ಮತ್ತು ಒಲಿಗೊಸ್ಪರ್ಮಿಯಾ:** ವೀರ್ಯಾಣುಗಳು ಇಲ್ಲದಿರುವಿಕೆ, ವೀರ್ಯಾಣು ಉತ್ಪನ್ನ ಕೊರತೆ ಅಥವಾ ಕುಂಠಿತ ವೀರ್ಯಾಣು ಪ್ರಮಾಣ.
- **ಅಸ್ಥೆನೋಸ್ಪರ್ಮಿಯಾ:** ವೀರ್ಯಾಣುಗಳು ಉತ್ಪನ್ನಗೊಂಡಾಗ, ಅವುಗಳ ಚಲನವಲನೆ ಅಸಹಜವಾಗಿರುವುದು.
- ವೀರ್ಯಾಣು ರಚನೆಯಲ್ಲಿನ ವ್ಯತ್ಯಾಸದಿಂದಾಗಿ ಗರ್ಭಧಾರಣೆ ಉಂಟಾಗದಿರುವಿಕೆ.
- ವೃಷಣಕೋಶದಲ್ಲಿನ ನಾಳಗಳು ಊದಿಕೊಂಡಾಗ ವೆರಿಕೊಸೀಲ್ ಉಂಟಾಗುವುದು ಮತ್ತು ಇದರಿಂದಾಗಿ ಬಂಜೆತನ ಸಮಸ್ಯೆ ಉದ್ಭವಿಸುವುದು.
- ವೃಷಣಕೋಶದಲ್ಲಿನ ಒಂದು ಅಥವಾ ಎರಡೂ ವೃಷಣಗಳ ಸುತ್ತಲೂ ನೀರಿನಂತಹ ದ್ರವರೂಪದ ಪೊರೆಯ ಬೆಳವಣಿಗೆ ಉಂಟಾಗುವುದಕ್ಕೆ ಹೈಡ್ರೋಸೀಲ್ ಎಂದು ಕರೆಯಲಾಗುತ್ತಿದ್ದು, ಇದೊಂದು ನೋವುರಹಿತ ಬೆಳವಣಿಗೆಯಾಗಿದೆ ಮತ್ತು ಇದರಿಂದಾಗಿ ವೃಷಣಕೋಶದಲ್ಲಿ ಅಥವಾ ಆಂತರಿಕ ಭಾಗದಲ್ಲಿ ಉಂಟಾಗುವ ಊತದಿಂದಾಗಿ ಬಂಜೆತನ ಸಮಸ್ಯೆ ಎದುರಾಗುತ್ತದೆ.

### ಬಂಜೆತನ ತಪಾಸಣಾ ಪರೀಕ್ಷೆಗಳು:

**ಪುರುಷರಿಗೆ:** ಸಿಬಿಪಿ, ಇಎಸ್‌ಆರ್, ಸಿಯುಇ, ಯುಎಸ್‌ಜಿ ಅಬ್ಡಾಮೆನ್, ಯುಎಸ್‌ಜಿ, ಸ್ಕ್ರೋಟಮ್, ಸಮಗ್ರ ವೀರ್ಯ ವಿಶ್ಲೇಷಣೆ, ಸೀರಮ್, ಟೆಸ್ಟೋಸ್ಟಿರಾನ್, ಥೈರಾಯ್ಡ್ ಪ್ರೊಫೈಲ್, ಎಫ್‌ಎಸ್‌ಎಚ್, ಎಲ್‌ಎಚ್ ಟೆಸ್ಟಿಕ್ಯೂಲಾರ್ ಬಯಾಪ್ಸಿ.

**ಮಹಿಳೆಯರಿಗೆ:** ಸಿಪಿಪಿ, ಇಎಸ್‌ಆರ್, ಸಿಯುಇ, ಯುಎಸ್‌ಜಿ ಅಬ್ಡಾಮೆನ್, ಥೈರಾಯ್ಡ್ ಪ್ರೊಫೈಲ್ ಎಫ್‌ಎಸ್‌ಎಚ್, ಎಲ್‌ಎಚ್, ಸೀರಮ್ ಪ್ರೊಲ್ಯಾಕ್ಟಿನ್, ಎಚ್‌ಎಸ್‌ಜಿ, ಲ್ಯಾಪರೊಸ್ಕೋಪಿ, ಫಾಲ್ಲಿಕ್ಯೂಲಾರ್ ಸ್ಟಡಿ.



### ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನಲ್ಲಿ ಲಭ್ಯವಿರುವ ಚಿಕಿತ್ಸೆ:

ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನ ಜೆನೆಟಿಕ್ ಕಾನ್‌ಸ್ಟಿಟ್ಯೂಷನಲ್ ಸಿಸ್ಟಂ ವಿಧಾನದಲ್ಲಿ ಪುರುಷ ಮತ್ತು ಮಹಿಳೆಯರಲ್ಲಿನ ಬಂಜೆತನ ಸಮಸ್ಯೆಗೆ ಚಿಕಿತ್ಸೆ ನೀಡಲಾಗುತ್ತದೆ ಮತ್ತು ಒಂದು ಪರಿಣಾಮಕಾರಿ ಪರಿಹಾರ ಕೂಡ ನೀಡಲಾಗುತ್ತದೆ. ಹೀಗಾಗಿ, ಎರಡನೇಯ ಮತ್ತು ಮೂರನೇಯ ಮಗು ಪಡೆಯುವುದು ಸುಲಭವಾಗುತ್ತದೆ. ಹೋಮಿಯೋಪತಿ ಚಿಕಿತ್ಸೆಯ ಮೂಲಕ ಸುಮಾರು 50–60% ಪ್ರಯೋಜನಕರ ಫಲಿತಾಂಶಗಳನ್ನು ಪಡೆಯಬಹುದಾಗಿದೆ.



“ನನ್ನ ಹೆಸರು ವೆಂಕಟಲಕ್ಷ್ಮಿ, ಪೇಷೆಂಟ್ ಐಡಿ: BGTAX41. ನಾನು ಮದುವೆಯಾಗಿ ಐದು ವರ್ಷಗಳೇ ಕಳೆದಿದ್ದರೂ ನಾನು ಗರ್ಭಧರಿಸಲು ಸಾಧ್ಯವಾಗಿರಲಿಲ್ಲ. ನಾನು ತುಂಬಾ ವ್ಯಾಕುಲಳಾಗಿದ್ದೆ. ನಾವಿಬ್ಬರೂ ದಂಪತಿಗಳು ವಿವಿಧ ರೀತಿಯ ಚಿಕಿತ್ಸೆಗಳನ್ನು ಪಡೆದುಕೊಂಡೆವಾದ್ರೂ, ಏನೂ ಪ್ರಯೋಜನವಾಗಿರಲಿಲ್ಲ. ಒಂದು ದಿನ, ನನ್ನ ಗಂಡ ಟಿವಿಯಲ್ಲಿ ಜಾಹೀರಾತು ಒಂದನ್ನು ನೋಡಿ, ಹೋಮಿಯೊಕೇರ್ ಇಂಟರ್‌ನ್ಯಾಷನಲ್ ಸಂಪರ್ಕಿಸಿ ಅಪಾಯಿಂಟ್ಮೆಂಟ್ ಪಡೆದುಕೊಂಡರು. ಅಲ್ಲಿನ ವೈದ್ಯರು ನಮ್ಮ ಸಮಸ್ಯೆಯ ಕುರಿತು ಸಮಗ್ರವಾಗಿ ತಪಾಸಣೆ ನಡೆಸಿದ ಬಳಿಕ ನನಗೆ ಚಿಕಿತ್ಸೆ ನೀಡಲು ಆರಂಭಿಸಿದರು. ನಾನು ಕಾನ್‌ಸ್ಟಿಟ್ಯೂಷನಲ್ ಹೋಮಿಯೊಪತಿ ಔಷಧಿ ಸೇವಿಸತೊಡಗಿದ ಬಳಿಕ ಕೇವಲ ಆರು ತಿಂಗಳಲ್ಲಿ ಗರ್ಭವತಿಯಾಗಿದ್ದೆ. ಇದೀಗ ನಮಗೆ ಒಂದು ಮುದ್ದಾದ ಹೆಣ್ಣು ಮಗು ಜನಿಸಿದೆ ಹಾಗೂ ನಮ್ಮದೀಗ ಮೂರು ಜನರ ಕುಟುಂಬವಾಗಿದೆ. ನಮ್ಮ ಸಂತೋಷಕ್ಕೆ ಪಾರವೇ ಇಲ್ಲವಾಗಿದೆ. ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ಗೆ ತುಂಬಾ ತುಂಬಾ ಥ್ಯಾಂಕ್ಸ್”.

HOMEOCARE INTERNATIONAL
ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಉಚಿತ ಕರೆ 1800 108 1212

ಉಚಿತ ಸಮಾಲೋಚನೆ 955 000 1133

www.homeocare.in